ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 19/12/20

ಶಾಸನಸಭೆಗಳೆಂದರೆ ಅವು ಸಾಮಾನ್ಯ ಕಟ್ಟಡಗಳಲ್ಲ, ಕಲ್ಲು, ಮಣ್ಣು, ಅಮೃತಶಿಲೆ, ಹೊಳೆವ ಪೀಠೋಪಕರಣಗಳಲ್ಲ. 'ಮಾತಿನ ಮನೆ'ಗಳೆಂದರೆ ಆಯಾ ನಾಡಿನ ಸಭ್ಯತೆ, ಘನತೆ ಮತ್ತು ಅಸ್ಮಿತೆ. ಆದಕ್ಕೆ ಕುಂದುಂಟು ಮಾಡುವ ನಡತೆ ಸಹಿಸಲಾಗದು.

# ಮಂಕಾಯಿತೇಕೆ ನಾಡಿನ ಮೇಲ್ಮನೆ?



ಚಿಂತನ

ಅಡಗೂರು ಎಚ್. ವಿಶ್ವನಾಥ್

ನಮ್ಮ ನಾಡಿನ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿಗೆ ಭಾರತದ ಪ್ರಜಾತಾಂತ್ರಿಕ ಭೂಪಟದಲ್ಲಿ ಮಹತ್ವದ ಸ್ಥಾನ ಇದೆ. ವಿಧಾನಸೌಧದ ಬಾಹ್ಯ ಸೌಂದರ್ಯ, ಭವ್ಯತೆಗಳಷ್ಟೇ, ಅದರ ಅಂತರಂಗದ ಕಳಕಳಿ, ಆಶಯ ಕೂಡ ಮುಖ್ಯ ಸಂಗತಿ. ನಾಡಿನ ಪ್ರಜೆಗಳ ಆಶೋತ್ತರಗಳನ್ನು ಪ್ರತಿನಿಧಿಸಲು ಆಯ್ಕೆಯಾದವರ ನಡೆ-ನುಡಿ, ಸಂಸ್ಕೃತಿ, ಭಾಷೆ, ಜ್ಞಾನ, ವಿದ್ಯೆ, ಸಭ್ಯತೆ, ಅವರೆದೆಯಲ್ಲಿನ ಕರುಣೆ, ಜನಪರ ನಿಲುವುಗಳು ಅಲ್ಲಿಂದ ಫಲಿಸಬೇಕಾದ ಕನ್ನಡಿಗಳು. ನಮ್ಮೆರಡೂ ಮಾತಿನ ಮನೆಗಳಾದ ಮೇಲ್ಮನೆ, ಕೆಳಮನೆಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಆ ಜನಸಮುದಾಯ ನೋಡುತ್ತದೆ, ತಿಳಿಯುತ್ತದೆ, ಸ್ಫೂರ್ತಿ ಪಡೆಯುತ್ತದೆ, ಕೆಲವೊಮ್ಮೆ ಅನುಸರಿಸುತ್ತದೆ. ಆಯಾ ನಾಡಿನ ಸಾಹಿತಿಗಳು, ಚಿಂತಕರು, ಕಲಾವಿದರು ಮಾಡುವ ಟೀಕೆ, ಟಿಪ್ಪಣಿ, ವಿಮರ್ಶೆಗಳಿಗೆ ಅಂಜಿಬಾಳುವ ಜನಪ್ರತಿನಿಧಿಗಳು ನಿಜವಾದ ಪ್ರಜಾಪ್ರಭುತ್ವವಾದಿಗಳಾಗಿರುತ್ತಾರೆ. ಅಂತಹ ಎಚ್ಚರವಿರುವ ನಾಡುಗಳಲ್ಲಿ ಮಾತ್ರವೇ ಪ್ರಜಾಪ್ರಭುತ್ವ ಜೀವಂತವಾಗಿದೆ. ಇನ್ನುಳಿದ ಕಡೆ ಅದು ಪ್ರೇತರೂಪಿಯಾಗಿದೆಯಷ್ಟೆ.

ನನ್ನ ಪುಸ್ತಕಗಳಾದ 'ದಿ ಟಾಕಿಂಗ್ ಶಾಪ್' ಹಾಗೂ 'ಅಥೆನ್ಸಿನ ರಾಜ್ಯಾಡಳಿತ' ಕುರಿತ ಅಧ್ಯಯನಕ್ಕಾಗಿ ನನ್ನದೇ ಆಸಕ್ತಿ, ಖರ್ಚಿನಲ್ಲಿ ಇಂಗ್ಲೆಂಡ್ ಹಾಗೂ ಗ್ರೀಸ್ ದೇಶಗಳ ಪಾರ್ಲಿಮೆಂಟ್‌ಗಳನ್ನು ಹೊಕ್ಕಿ ಬಂದಿರುವೆ. ಅಲ್ಲಿನ ಶಾಸಕರಿಗೆ ವಿಧಿಸಿರುವ ಕಟ್ಟುಪಾಡು ಕಂಡು ಬೆರಗಾದೆ. ಯಾವುದೇ ಮನುಷ್ಯ ಅಲ್ಲಿ ಶಾಸಕನಾಗಿರುವ ಅವಧಿ ಅವನು ತನ್ನನ್ನು ತಾನು ಅತಿ ಎಚ್ಚರದಿಂದ ಪ್ರದರ್ಶಿಸಿಕೊಳ್ಳಬೇಕಾದ ಅಮೂಲ್ಯ ಅವಧಿಯಾಗಿರುತ್ತದೆ. ಅವನ ಉಡುಪು, ಶಿಷ್ಟಾಚಾರ, ಮಾತುಕತೆ, ಆರ್ಥಿಕ ಸ್ವಚ್ಛತೆ, ವೈಯಕ್ತಿಕ ಜೀವನ, ಸಾರ್ವಜನಿಕ ನಡವಳಿಕೆ ಇವೆಲ್ಲವನ್ನೂ ಕುಶಲತೆಯಿಂದ ನಿಭಾಯಿಸಲೇಬೇಕಾದ ಜೀವನದ ಅತಿ ಜವಾಬ್ದಾರಿಯ ಕಾಲವಾಗಿರುತ್ತದೆ. ಆತ ಜನರ ಸ್ವತ್ತಾಗಿರುತ್ತಾನೆ. ಸರಕಾರಕ್ಕೆ, ಸಮಾಜಕ್ಕೆ ಉತ್ತರದಾಯಿಯಾಗಿರುತ್ತಾನೆ. ಆತ ಒಂದೊಮ್ಮೆ ತಪ್ಪಿ ನಡೆದರೆ, ಮತದಾರರ ವಿಶ್ವಾಸಕ್ಕೆ ಭಂಗ ತಂದರೆ, ತಾನು ಕೂರುವ ಸಭೆಗಳ ಪಾವಿತ್ರ್ಯತೆಗೆ ಕಳಂಕ ತಂದರೆ ಭಾರೀ ಬೆಲೆ ತೆರಬೇಕಾಗುತ್ತದೆ. ಆತನನ್ನು ಯಾವ ರಾಜಕೀಯ ಪಕ್ಷಗಳೂ ಜಾತಿ ಧರ್ಮಗಳೂ ಹಣಕಾಸುಗಳೂ ರಕ್ಷಿಸಲಾರವು. ಆದರೆ ನಾವಿಲ್ಲಿ ಏನಾಗಿದ್ದೇವೆ? ಎಷ್ಟೆಲ್ಲ ಮಹನೀಯರ, ಪ್ರಾತಃಸ್ಮರಣೀಯರ ಶ್ರಮ, ಔದಾರ್ಯ ಹಾಗೂ ಪ್ರಜಾಪ್ರೇಮದ ಅದ್ಭುತ ಮೌಲ್ಯದ ಪವಿತ್ರ ತಳಹದಿಯ ಮೇಲೆ ಮೂಡಿದ ಕಟ್ಟಡದಲ್ಲಿ ತಾವು ಕೂತು ಕೆಲಸ ಮಾಡುತ್ತಿದ್ದೀವಿ ಎಂಬುದನ್ನೇ ಮರೆಯುತ್ತಿದ್ದೇವೆ. ಬೇರು ಮರೆತ ಟೊಳ್ಳು ಮರಗಳಾಗುತ್ತಿದ್ದೇವೆ.

ಇತ್ತೀಚೆಗಷ್ಟೇ ಸನ್ಮಾನ್ಯ ಪ್ರಧಾನಿ ನರೇಂದ್ರ ಮೋದಿ ಅವರು ಹೊಸ ಸಂಸತ್ ಭವನದ ಶಿಲಾನ್ಯಾಸ ಮಾಡಿದ್ದಾರೆ. ನವ ಭಾರತಕ್ಕಾಗಿ, ಹೊಸ ಶಾಸನಗಳ ರಚನೆಯ ಮುನ್ನುಡಿ ಬರೆಯಲು ತವಕಿಸುತ್ತಿದ್ದಾರೆ. ಆದರೆ ನಮ್ಮ ಶಾಸಕರು ಮಾಡುತ್ತಿರುವುದೇನು? ಹಲವು ಮುತ್ಸದ್ಧಿಗಳು, ಜನಸೇವಕರು, ಪ್ರಜಾಪ್ರಭುತ್ವ ಪ್ರೇಮಿಗಳು, ಸಂಕಲ್ಪಿಸಿ ಕನಸು ಕಂಡು, ತಮ್ಮವರಿಗೆ ನಾಗರಿಕ, ಪ್ರಜಾಸತ್ತಾತ್ಮಕ ಆಡಳಿತ ನೀಡಲು, ಉತ್ತಮೋತ್ತಮ ಶಾಸನ ರೂಪಿಸಲು ಕಟ್ಟಿದ ಶಾಸನಸಭೆಗಳು. ಆದಕ್ಕೆ ಕುಂದುಂಟು ಮಾಡುವ ನಡತೆಯನ್ನು ಸಹಿಸಬಾರದು. ಆಗಾಗ ಅಲ್ಲಲ್ಲಿ ಜಾರ್ಖಂಡ್, ಛತ್ತೀಸ್‌ಗಢ ಮುಂತಾದ ಕಡೆ ವಿಧಾನಸಭೆಗಳಲ್ಲಿ ಶಾಸಕರ ಕಿತ್ತಾಟ, ನೂಕಾಟ, ಹೊಡೆದಾಟಗಳ ಬಗ್ಗೆ ಕೇಳುತ್ತಿದ್ದೀವಿ. ಚಾಣಕ್ಯನಂತಹ ಮೇರುಗುರುವಿನ ಪರಂಪರೆ ನಮ್ಮದು. ರಾಜ, ಮಂತ್ರಿ ಹೇಗೆ ಜನರೆದುರು ತಮ್ಮನ್ನು ಪ್ರದರ್ಶಿಸಿಕೊಳ್ಳಬೇಕೆಂದು ಜಗತ್ತಿಗೇ ಆತ ಹೇಳಿಕೊಟ್ಟಿದ್ದಾನೆ. ಮಹಾಭಾರತ, ರಾಮಾಯಣ ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ ಕೃತಿಗಳು. ಅವೂ ಕೂಡ ರಾಜಧರ್ಮ, ಆದರ್ಶ ರಾಜ, ಪ್ರಜಾರಾಜ್ಯಗಳ ಮಾತನ್ನಾಡಿವೆ. ಮಹಾಜ್ಞಾನಿ ಸಾಕ್ರೆಟೀಸ್ ಮಹಾಶಯ ತನ್ನ ಮೇರುಗ್ರಂಥ ರಿಪಬ್ಲಿಕ್‌ನಲ್ಲಿ ಶಾಸಕನ ಭಾಷೆ, ಸಂಸ್ಕಾರ, ನಡವಳಿಕೆಗಳ ಬಗ್ಗೆ ಸುದೀರ್ಘ ಅಧ್ಯಾಯಗಳನ್ನೇ ಬರೆದಿದ್ದಾನೆ. ಶಾಸನಸಭೆಗಳು ಪ್ರಜಾರಾಜ್ಯದ ದೇವಾಲಯಗಳು ಎಂದಿದ್ದಾನೆ. ಯೂರೋಪ್ ಖಂಡಕ್ಕೇ ಆಡಳಿತದ ಪಟ್ಟುಗಳನ್ನು ಕಲಿಸಿದ ಇಟಲಿಯ ಮುಸುಲೋನಿ ಕೂಡ ಶಾಸನಸಭೆಗಳು ಪ್ರಜಾಪ್ರಭುತ್ವಕ್ಕೆ ಹಿಡಿದ ಕನ್ನಡಿ. ಅದು ಕೊಳೆಯಾಗದಿರಲಿ ಎಂದಿದ್ದಾನೆ. ಹೀಗೆ ಜಗತ್ತೇ ಗೌರವಿಸುವ ಶಾಸನಸಭೆಗಳು ನಮ್ಮ ನಡವಳಿಕೆಗಳಿಂದ ಮಲಿನಗೊಳ್ಳುತ್ತಿರುವುದು ದುಃಖದ ವಿಚಾರ.

ಮೇಲ್ಮನೆಗಳೆಂದರೆ ಹಿರಿಯರು, ಪ್ರಾಜ್ಞರು ನೆರೆದು ಜನರ ಒಳಿತನ್ನು ಚಿಂತಿಸುವ ತಾಣಗಳಾಗಿ ಈಗ ಉಳಿದಿವೆಯೇ? ಒಂದೊಮ್ಮೆ ಕೆಳಮನೆಯಲ್ಲಿ ವಾಗ್ವಾದಗಳಾದರೂ, ಮೇಲ್ಮನೆಯಲ್ಲಿ ಗುಣಮಟ್ಟದ ಚರ್ಚೆ, ಪ್ರತಿಪಕ್ಷದವರನ್ನು ಗೌರವಾದರಗಳಿಂದ ಕಂಡು ಪರಸ್ಪರ ಭಿನ್ನಾಭಿಪ್ರಾಯಗಳನ್ನೂ ಸಹನೆಯಿಂದ ತಾಳುವ ವಾತಾವರಣವಿರಬೇಕು. ನಾನು ಅನೇಕ ಮುತ್ಸದ್ದಿಗಳ ಜತೆ ಒಡನಾಡಿದವನು, ನಾನು ಶಾಸಕನಾಗಿ ಸದನಕ್ಕೆ ಬಂದು ಹೆಚ್ಚುಕಮ್ಮಿ ನಾಲ್ಕು ದಶಕಗಳೇ ಸಂದಿವೆ. ಗಂಗೆ ಕಾವೇರಿಗಳಲ್ಲಿ ಸಾಕಷ್ಟು ನೀರು ಹರಿದುಹೋಗಿವೆ. ಶಾಸಕರು ಜನರು ಏನೆಂದುಕೊಂಡಾರು ಎಂದು ಚಿಂತಿಸುವುದನ್ನು ಬಿಟ್ಟ ಹಾಗಿದೆ. ಕೈ ಕೈಮಿಲಾಯಿಸುವ ಹಂತಕ್ಕೆ ಹೋಗುವುದು ನಮ್ಮೆಲ್ಲರ ಪತನ ಸೂಚಿಸುತ್ತದೆ. ಮಂಗಳವಾರ ಸದನದಲ್ಲಾದ ವಿದ್ಯಮಾನ ಕರ್ನಾಟಕದ ಎಲ್ಲಾ ಶಾಸಕರೂ ಜನರ ಕ್ಷಮೆ ಬೇಡುವಂತೆ ಮಾಡಿದೆ. ರಾಜಕೀಯ ಶಾಸ್ತ್ರದ ಪಟ್ಟುಗಳನ್ನು ಜಗತ್ತಿಗೆ ತಿಳಿಸಿದ ನಮ್ಮ ಭವ್ಯ ನೆಲದ ಸತ್ವ ಅಳಿಯಿತೇ ಮಂಕಾಯಿತೇಕೆ ಮೇಲ್ಮನೆ? ವಿಚಾರದ ವೇದಿಕೆ ಬೀದಿಜಗಳದ ಮಟ್ಟಕ್ಕೆ ಇಳಿದುದರಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ತಪ್ಪೂ ಇದೆ. ಇದೀಗ ನಾವೆಲ್ಲ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಮಯ. ಮಂಕಾಗುತ್ತಿರುವ ಮೇಲ್ಮನೆ ಕಂಡು ಮನಸ್ಸು ಭಾರವಾಗಿದೆ.

(ಲೇಖಕರು ವಿಧಾನ ಪರಿಷತ್ ಸದಸ್ಯರು)